# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| ೦1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 620 |
| ೦2. | ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆ ಕ್ಷೇತ್ರದಿಂದ ಚುನಾಯಿತರಾದವರು) |
| ೦3. | ಉತ್ತರಿಸುವ ದಿನಾಂಕ | : | 04/03/2021 |
| ೦4. | ಉತ್ತರಿಸುವ ಸಚಿವರು. | : | ಮಾನ್ಯ ಗೃಹ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ)ರಾಜ್ಯದಲ್ಲಿ ಮಕ್ಕಳ ಮತ್ತು ಮಹಿಳೆಯರ ಕಳ್ಳಸಾಗಾಣಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; | ರಾಜ್ಯದಲ್ಲಿ ಮಕ್ಕಳ ಮತ್ತು ಮಹಿಳೆಯ ಕಳ್ಳಸಾಗಾಣಿಕೆ ಪ್ರಕರಣಗಳು ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>**<u>ಮಕ್ಕಳ ಮತ್ತು ಮಹಿಳೆಯ ಕಳ್ಳಸಾಗಾಣಿಕೆಯಾಗುವುದನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.</u>**<br><br>➢ ಮಾನವ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಸರ್ಕಾರವು <u>ನಿರ್ಭಯ ನಿಧಿ</u> ಅಡಿಯಲ್ಲಿ ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕಗಳನ್ನು ಸ್ಥಾಪಿಸಲು ಅನುಧಾನವನ್ನು ಬಿಡುಗಡೆ ಮಾಡಿರುತ್ತದೆ.<br><br>➢ ಸದರಿ ಅನುಧಾನದಲ್ಲಿ ರಾಜ್ಯದ ಎಲ್ಲಾ ನಗರ/ಜಿಲ್ಲೆಗಳಲ್ಲಿ ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕವನ್ನು ಸ್ಥಾಪಿಸಿದ್ದು, ಸದರಿ ಘಟಕಗಳು ಮಹಿಳಾ ಪೊಲೀಸ್ ಠಾಣೆಗಳ ಠಾಣಾಧಿಕಾರಿಗಳು ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.<br><br>➢ ಪ್ರತಿ ಮಾನವ ಕಳ್ಳಸಾಗಾಣಿಕೆ ಘಟಕಗಳಿಗೆ ಹಿರಿಯ ಮತ್ತು ಕಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳನ್ನು ನಿಯೋಜಿಸಿ, ಅವರುಗಳಿಗೆ ತರಬೇತಿ ನೀಡಲಾಗಿರುತ್ತದೆ.<br><br>➢ ಮಾನವ ಸಾಗಣಿಕೆ ಮಾಡುವವರ ವಿರುದ್ಧ ಸಾಕ್ಷಿ ಸಂಗ್ರಹಿಸಿ ತಪ್ಪಿತಸ್ಥರ ವಿರುದ್ಧ ಕಲಂ.370, 370[ಎ] ಐಪಿಸಿ ಮತ್ತು ಇಮ್‌ಮೋರಲ್ ಟ್ರಾಫಿಕಿಂಗ್ ಪ್ರಿವೆನ್ಸ್ ಆಕ್ಟ್ (ಐ.ಟಿ.ಪಿ.ಎ) ಹಾಗೂ ಸಂಬಂಧಪಟ್ಟ ಇತರೆ ಕಾಯ್ದೆ ಮತ್ತು ಕಲಂ ರೀತ್ಯಾ ಪ್ರಕರಣಗಳನ್ನು ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br><br>➢ ಮಾನವ ಕಳ್ಳಸಾಗಾಣಿಕೆಯ ಪ್ರಕರಣಗಳ ತನಿಖೆಯನ್ನು ಸಮರ್ಥವಾಗಿ ನಿರ್ವಹಿಸಲು ತನಿಖಾಧಿಕಾರಿಗಳಿಗಾಗಿ ನಿರ್ಧಿಷ್ಟ ಕಾರ್ಯವಿಧಾನವನ್ನು ಸಿದ್ದಪಡಿಸಿ, ಸ್ಥಾನಿ ಆದೇಶದ ಮೂಲಕ ರಾಜ್ಯ ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.<br><br>➢ ಅಪರಿಚಿತ ವ್ಯಕ್ತಿಗಳ ಬಳಿ ಸಂಪರ್ಕ ಇಟ್ಟುಕೊಳ್ಳದಂತೆ, ಆಸೆ ಆಮಿಷಗಳನ್ನು ಒಡ್ಡುವ ಆಸಾಮಿಗಳ ಬಗ್ಗೆ ಮಹಿಳೆಯರಿಗೆ & ಮಕ್ಕಳಿಗೆ ಹಾಗೂ ಗ್ರಾಮಗಳಲ್ಲಿ ಸೂಕ್ತ ತಿಳುವಳಿಕೆಗಳನ್ನು ನೀಡಲಾಗಿರುತ್ತದೆ.<br><br>➢ ಅಪರಾಧ ಚಟುವಟಿಕೆಗಳಲ್ಲಿ ಹಾಗೂ ಮಕ್ಕಳ ಚಿಕ್ಕಾಟನೆಯಲ್ಲಿ ತೊಡಗಿಸಿರುವಂತಹ ಅಪರಿಚಿತ ವ್ಯಕ್ತಿಗಳು ಕಂಡು ಬಂದಲ್ಲಿ ಅಂತಹವರು ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿರುತ್ತದೆ.<br><br>➢ ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ವಿವಿಧ ಹೆಸರುಗಳಡಿಯಲ್ಲಿ ವಿಶೇಷ ಪಡೆಗಳನ್ನು ರಚಿಸಿದ್ದು, ಸದರಿ ಪಡೆಯು ನಗರದ ಮತ್ತು |

| | |
|---|---|
| | ಜಿಲ್ಲಾ ವ್ಯಾಪ್ತಿಯ ಶಾಲಾ- ಕಾಲೇಜು, ಪಾರ್ಕ್‌ಗಳು, ಹಾಸ್ಟೆಲ್, ಪಿಜಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮತ್ತು ಇತರೆ ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳು ಓಡಾಡುವ ಸ್ಥಳಗಳಲ್ಲಿ ಪ್ರತಿದಿನ ಗಸ್ತು ಮಾಡುತ್ತಾ ಅರಿವು ಮೂಡಿಸಲಾಗುತ್ತಿದೆ.<br>➢ ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾಣ ನಿಲ್ದಾಣ ಮತ್ತು ಜನನಿಬಿಡ ಸ್ಥಳಗಳಲ್ಲಿ ಹಾಗೂ ಪ್ರಮುಖ ಸ್ಥಳಗಳನ್ನು ಗುರುತಿಸಿ ಸಿಸಿ ಟಿ.ವಿ ಕ್ಯಾಮರಾಗಳನ್ನು ಅಳವಡಿಸಿದ್ದು ಅವುಗಳ ಸಹಾಯದಿಂದ ಮಹಿಳೆಯರ ಮತ್ತು ಮಕ್ಕಳ ಸಾಗಾಟ ಮಾಡುವವರ ಮೇಲೆ ನಿಗಾವಹಿಸಲಾಗಿದೆ.<br>➢ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬೀಟ್ ಸಿಬ್ಬಂದಿಗಳ ಮೂಲಕ ಹಾಗೂ ಬೀಟ್‌ಗ್ರೂಪ್ ಸದಸ್ಯರ ಮೂಲಕ ಮಾನವ ಕಳ್ಳಸಾಗಾಣಿಕೆ ಬಗ್ಗೆ ಸಂಬಂಧಿಸಿದಂತೆ ಮುಂಚಿತವಾಗಿ ಮಾಹಿತಿ ಸಂಗ್ರಹಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಕೊಳ್ಳುವ ವ್ಯವಸ್ಥೆ ಮಾಡಲಾಗಿದೆ.<br>➢ ಚಾಲ್ತಿಯಲ್ಲಿರುವ ಸಾಮಾಜಿಕ ಜಾಲತಾಣಗಳಾದ ಬ್ಲಾಗ್, ಟ್ವಿಟರ್, ಫೇಸ್ ಬುಕ್, ಪೊಲೀಸ್ ವೆಬ್ ಸೈಟ್ ಹಾಗೂ ಇತರೆ ಜಾಲತಾಣಗಳ ಮೂಲಕ ಮಾನವ ಕಳ್ಳ ಸಾಗಾಣೆ ಬಗ್ಗೆ ಜಾಗೃತಿ ಮೂಡಿಸುವ ಸಂದೇಶವನ್ನು ಪ್ರಕಟಿಸಲಾಗಿದೆ. |
| ಆ) ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಪ್ರಕರಣ ದಾಖಲಾಗಿವೆ ? (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಾನವ ಕಳ್ಳಸಾಗಾಣಿಕೆಗೆ ಸಂಬಂಧಿಸಿದಂತೆ ದಾಖಲಾಗಿರುವ ಜಿಲ್ಲಾವಾರು ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

**ಒಇ05ಪಿಸಿಕ್ಯೂ 2021**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆ ಕ್ಷೇತ್ರದಿಂದ ಚುನಾಯಿತರಾದವರು)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.620 ಕ್ಕೆ ಅನುಬಂಧ

| SL NO | Name of Unit | No. Of Reported Cases (2018) | No. Of Reported Cases (2019) | No. Of Reported Cases (2020) | No. Of Reported Cases (up to Feb 2021) |
|---|---|---|---|---|---|
| 1 | Bagalkot | 0 | 0 | 0 | 0 |
| 2 | Ballari | 9 | 11 | 6 | 1 |
| 3 | Belagavi City | 0 | 0 | 0 | 0 |
| 4 | Belagavi Dist | 0 | 0 | 0 | 0 |
| 5 | Bengaluru City | 98 | 102 | 93 | 12 |
| 6 | Bengaluru Dist | 0 | 1 | 0 | 0 |
| 7 | Bidar | 0 | 0 | 0 | 0 |
| 8 | Chamarajanagar | 2 | 2 | 0 | 0 |
| 9 | Chickballapura | 1 | 0 | 0 | 0 |
| 10 | Chikkamagaluru | 0 | 0 | 0 | 1 |
| 11 | Chitradurga | 1 | 0 | 0 | 0 |
| 12 | Dakshina Kannada | 0 | 0 | 0 | 0 |
| 13 | Davanagere | 0 | 1 | 2 | 0 |
| 14 | Dharwad | 0 | 1 | 0 | 0 |
| 15 | Gadag | 0 | 0 | 0 | 0 |
| 16 | Hassan | 0 | 0 | 0 | 0 |
| 17 | Haveri | 0 | 3 | 0 | 0 |
| 18 | Hubballi Dharwad City | 3 | 3 | 2 | 0 |
| 19 | K.G.F | 0 | 1 | 0 | 0 |
| 20 | Kalaburagi City | 0 | 0 | 0 | 0 |
| 21 | Kalaburagi | 2 | 0 | 0 | 0 |
| 22 | Kodagu | 0 | 0 | 0 | 0 |
| 23 | Kolar | 0 | 0 | 0 | 0 |
| 24 | Koppal | 0 | 0 | 0 | 0 |
| 25 | Mandya | 6 | 2 | 1 | 0 |
| 26 | Mangaluru City | 4 | 4 | 3 | 0 |
| 27 | Mysuru City | 5 | 4 | 0 | 0 |
| 28 | Mysuru Dist | 4 | 5 | 0 | 0 |
| 29 | Raichur | 2 | 0 | 0 | 0 |
| 30 | Ramanagara | 1 | 1 | 0 | 0 |
| 31 | Shivamogga | 4 | 2 | 2 | 0 |
| 32 | Tumakuru | 4 | 6 | 2 | 0 |
| 33 | Udupi | 0 | 0 | 0 | 0 |
| 34 | Uttara Kannada | 0 | 2 | 1 | 0 |
| 35 | Vijayapur | 0 | 0 | 0 | 0 |
| 36 | Yadgir | 1 | 3 | 4 | 0 |
| 37 | Karnataka Railways | 0 | 0 | 0 | 1 |
| 38 | ISD | 0 | 0 | 0 | 0 |
| | **Total** | **147** | **154** | **116** | **15** |